ಅರ್ಥವಾಗಲ್ಲ, ದೊಡ್ಡವಳಾದ ಮೇಲೆ ಗೊತ್ತಾಗುತ್ತೆ."

ಪರ್ವೀನ್ ಏನೂ ಪ್ರತಿಕ್ರಿಯಿಸದೆ ಮುಖ ಇಳಿಬಿಟ್ಟು ಕೇಳಿದಳು, "ಹಾಗಾದ್ರೆ ನಾವು ಹೋಗ್ತಾ ಇಲ್ವಾ?"

"ಇಲ್ಲ ಪುಟ್ಟ, ಇನ್ನೊಂದು ದಿನ ಕರ್ಕೊಂಡು ಹೋಗ್ತೀನಿ."

"ಆದರೆ... ನಾನು ಹೋಗದೆ ಇದ್ರೆ ಅವಳ ಹುಟ್ಟಿದ ಹಬ್ಬ ಆಗೋಲ್ಲ."

ಫರ್ಝಾನಾ ಗಲ್ಲ ಹಿಡಿದು ಮುದ್ದು ಮಾಡುತ್ತಾ ಹೇಳಿದಳು, "ಯಾರು ಹೇಳಿದ್ದು, ಆಗೋಲ್ಲ ಅಂತ. ಪ್ರೀತಿ ಹುಟ್ಟಿದ ಹಬ್ಬ ಆಗುತ್ತೆ."

"ಇಲ್ಲ ಅಮ್ಮ, ನಾನು ಹೋಗದಿದ್ರೆ ಅವಳ ಹುಟ್ಟಿದ ಹಬ್ಬ ಆಗೋಲ್ಲ."

ಫರ್ಝಾನಾ ಮನಸ್ಸಿನಲ್ಲೇ ನಗುತ್ತಾ ಅಂದುಕೊಂಡಳು. ಎಂಥ ಮುಗ್ಧ ಮಗು! ಜಗತ್ತು ಎಷ್ಟು ಜಟಿಲ. ಇನ್ನೂ ಒಂಚೂರು ಗೊತ್ತಿಲ್ಲ. ಅವಳಿಲ್ಲದೆ ಅವಳ ಗೆಳತಿಯ ಹುಟ್ಟಿದ ಹಬ್ಬ ಆಗಲ್ಲವಂತೆ!

ಫರ್ಝಾನಾ ತಾನೇ ಫೋನ್ ಮಾಡಿ ಬರಲಾಗುತ್ತಿಲ್ಲವೆಂದು ಅವರಿಗೆ ತಿಳಿಸಬೇಕು ಎಂದುಕೊಂಡಿದ್ದಳು. ಅಷ್ಟೊತ್ತಿಗೆ ದಾಶಗುಪ್ತೊ ಅವರೇ ಫೋನ್ ಮಾಡಿದರು.

"ಬರ್ತಾ ಇದೀರಿ ಅಲ್ವಾ?"

ಸ್ವಲ್ಪ ಹಿಂಜರಿಕೆಯ ಧ್ವನಿಯಲ್ಲಿ ಫರ್ಝಾನಾ ನುಡಿದಳು, "ಬರಬೇಕು ಅಂದುಕೊಂಡಿದ್ದೆ, ಅವರು ಬಾಂಬೆಗೆ ಹೋಗಿದಾರೆ. ನಿಮಗೂ ಗೊತ್ತಲ್ಲಾ, ನಗರದಲ್ಲಿ ಏನ್ ನಡೀತಾ ಇದೆ ಅಂತ, ಈ ಪರಿಸ್ಥಿತಿಲಿ ನಾನೊಬ್ಬಳೆ?"

ದಾಶಗುಪ್ತೊ ಅವಳ ಆತಂಕವರಿತು ಹೇಳಿದರು, "ಅರ್ಥವಾಗುತ್ತೆ, ನೀವು ಒಬ್ಬರೇ ಬರೋದು ಸರಿಯಲ್ಲ. ನಾನೇ ಬಂದು ಕರ್ಕೊಂಡು ಹೋಗ್ತಾ ಇದ್ದೆ..."

